# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಶರವಣ ಟಿ. ಎ. (ವಿಧಾನಸಭೆಯಿಂದ ಚುನಾಯಿತರಾದವರು)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 889

ಉತ್ತರ ದಿನಾಂಕ : 14.07.2023

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಜಲ–ಜೀವನ್ ಮಿಷನ್ ಅಭಿಯಾನ ಯಾವ ವರ್ಷದಿಂದ ಜಾರಿಗೊಳಿಸಲಾಗಿದೆ; ಈ ಯೋಜನೆಯ ಧ್ಯೇಯೋದ್ದೇಶಗಳು ಯಾವುವು; (ಸಂಪೂರ್ಣ ವಿವರ ನೀಡುವುದು) | ರಾಜ್ಯದಲ್ಲಿ ಜಲ–ಜೀವನ್ ಮಿಷನ್ ಯೋಜನೆಯನ್ನು 15ನೇ ಆಗಸ್ಟ್ 2019ರಿಂದ ಜಾರಿಗೆ ಬಂದಿರುತ್ತದೆ.<br>ಜಲ ಜೀವನ ಮಿಷನ್ ಯೋಜನೆಯ ಉದ್ದೇಶ ಹಾಗೂ ರೂಪರೇಷಗಳು:<br>1. ಗ್ರಾಮೀಣ ಕುಟುಂಬಗಳ ಪ್ರತಿ ವ್ಯಕ್ತಿಗೆ ಪ್ರತಿ ದಿನ 55LPCD ಯಂತೆ ಕ್ರಿಯಾತ್ಮಕ ನಳ ನೀರು ಸಂಪರ್ಕ ( Functional Household Tap Connection ) ಒದಗಿಸುವುದು.<br>2. ಶಾಲೆ, ಅಂಗನವಾಡಿ ಕೇಂದ್ರಗಳು, ಗ್ರಾಮ ಪಂಚಾಯತ್ ಕಟ್ಟಡಗಳು, ಆರೋಗ್ಯ ಕೇಂದ್ರಗಳು, ಪೋಷ್ಠಿಕ ( Wellness) ಕೇಂದ್ರಗಳು ಮತ್ತು ಸಮುದಾಯ ಕಟ್ಟಡಗಳಿಗೆ ನಳ ನೀರು ಸಂಪರ್ಕವನ್ನು ಒದಗಿಸುವುದು.<br>3. ನಳ ಸಂಪರ್ಕಗಳ ಕಾರ್ಯವನ್ನು ಮೇಲ್ವೀಚಾರಣೆ ಮಾಡುವುದು.<br>4. ಸಮುದಾಯದಲ್ಲಿ ಸ್ವಯಂಪ್ರೇರಿತ ಸ್ಥಳೀಯ ಮಾಲೀಕತ್ವವನ್ನು ಉತ್ತೇಜಿಸಲು & ನಗದು ರೀತಿಯ/ಅಥವಾ ಸ್ವಯಂಪ್ರೇರಿತ ಕಾರ್ಮಿಕರ ಶ್ರಮದಾನದ ಕೊಡುಗೆಯನ್ನು ಖಚಿತಪಡಿಸುವುದು.<br>5. ನೀರು ಸರಬರಾಜು ವ್ಯವಸ್ಥೆಯನ್ನು ಸುಸ್ಥಿರಗೊಳಿಸಲು ಅಂದರೆ ನೀರಿನ ಮೂಲ, ನೀರು ಸರಬರಾಜು ಮೂಲಸೌಕರ್ಯ ಮತ್ತು ನಿಯಮಿತ ಕಾರ್ಯಾಚರಣೆ & ನಿರ್ವಹಣೆಗಾಗಿ ಸಮುದಾಯದ ವಂತಿಕೆ ಸಂಗ್ರಹಿಸುವುದು.<br>6. ಆದ್ಯತೆ ಮೇಲೆ ಕುಡಿಯುವ ನೀರಿನ ಗುಣಮಟ್ಟವನ್ನು ಆಧರಿಸಿ ಅಂತಹ ಪ್ರದೇಶಗಳಲ್ಲಿ, ಬರಪೀಡಿತ ಪ್ರದೇಶಗಳಲ್ಲಿ, ಸಂಸದರ ಆದರ್ಶ ಗ್ರಾಮ ಯೋಜನೆಯಲ್ಲಿನ ಮನೆಗಳಿಗೆ ನಳಗಳನ್ನು ಕಲ್ಪಿಸುವುದು.<br>7. ಕಲ್ಪಿಸಲಾಗಿರುವ ನಳಗಳಲ್ಲಿ ಕುಡಿಯುವ ನೀರು ಸರಬರಾಜಿನ ಬಗ್ಗೆ ಖಚಿತ ಪಡಿಸಿಕೊಳ್ಳುವುದು.<br>8. ಸುಸ್ಥಿರ ಕುಡಿಯುವ ನೀರು ವ್ಯವಸ್ಥೆ ಅಂದರೆ ನೀರಿನ ಮೂಲ, ಸರಬರಾಜಿನ ವ್ಯವಸ್ಥೆ ಮತ್ತು ನಿರ್ವಹಣೆಗೆ ಧನಮೂಲದ ಸಂಯೋಜನೆ.<br>9. ಈ ವ್ಯವಸ್ಥೆಗೆ ಬೇಕಾಗುವ ಮಾನವ ಸಂಪನ್ಮೂಲ ಅಭಿವೃದ್ಧಿ ಪಡಿಸುವುದು. ಇವುಗಳಲ್ಲಿ ಕಟ್ಟಡ ಕಾಮಗಾರಿ, ಕೊಳವೆ ಕೆಲಸ, ವಿದ್ಯುಚ್ಛಕ್ತಿ ಕಾಮಗಾರಿ, ನೀರಿನ ಗುಣ ನಿರ್ವಹಣೆಗೆ, ನೀರಿನ ಸಂಸ್ಕರಣೆ, ಜಲಮೂಲದ ಜಲಾನಯನ ರಕ್ಷಣೆ, ನೀರು ಸರಬರಾಜು ವ್ಯವಸ್ಥೆ ಮತ್ತು ನಿರ್ವಹಣೆಗಳನ್ನು ಅಲ್ಪಾವಧಿ ಮತ್ತು ದೀರ್ಘಾವಧಿಗೆ ಯೋಜಿಸುವುದು.<br>10. ಸೌಲಭ್ಯ ಪಡೆಯುವವರ ಭಾಗವಹಿಸುವಿಕೆಯೂ ಸೇರಿದಂತೆ ಸುರಕ್ಷಿತ ಕುಡಿಯುವ ನೀರಿನ ಮೌಲ್ಯ ಮತ್ತು ಹಲವಾರು ವಿಷಯಗಳಲ್ಲಿ ತಿಳುವಳಿಕೆ ಮೂಡಿಸುತ್ತಾ ಕುಡಿಯುವ ನೀರು ಪ್ರತಿಯೊಬ್ಬರಿಗೂ ಅವಶ್ಯವೆಂದು ತಿಳಿಸುವುದು. |

<table>
<tr>
<td>ಆ)</td>
<td>ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದಿಂದ ಜಲ-ಜೀವನ್ ಮಿಷನ್ ಅಭಿಯಾನದಡಿ ಕಳೆದ 2 ವರ್ಷಗಳಲ್ಲಿ ನಿಗಧಿಪಡಿಸಲಾಗಿರುವ ಒಟ್ಟು ಗುರಿ ಎಷ್ಟು; (ಜಿಲ್ಲೆ ಮತ್ತು ತಾಲ್ಲೂಕುವಾರು ಸಾಧಿಸಲಾಗಿರುವ ಆರ್ಥಿಕ ಮತ್ತು ಭೌತಿಕ ಗುರಿಗಳ ಸಂಪೂರ್ಣ ವಿವರ ನೀಡುವುದು)</td>
<td>ರಾಜ್ಯದಲ್ಲಿ ಒಟ್ಟು 101.17 ಲಕ್ಷ ಗ್ರಾಮೀಣ ಮನೆಗಳಿದ್ದು, 15ನೇ ಆಗಸ್ಟ್ 2019ರವರೆಗೆ 24.51 ಲಕ್ಷ ಮನೆಗಳು ನಳ ಸಂಪರ್ಕ ಹೊಂದಿರುತ್ತದೆ. ಜಲ್ ಜೀವನ್ ಮಿಷನ್ ಯೋಜನೆಯಡಿ ಈವರೆಗೆ 45.00 ಲಕ್ಷ ಮನೆಗಳಿಗೆ ಕಾರ್ಯಾತ್ಮಕ ನಳ ಸಂಪರ್ಕ ಒದಗಿಸಲಾಗಿದ್ದು, ಒಟ್ಟಾರೆ 69.52 ಲಕ್ಷ ಗ್ರಾಮೀಣ ಮನೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಲಾಗಿರುತ್ತದೆ.<br><br>ಕಳೆದ 2 ವರ್ಷಗಳಲ್ಲಿ ರಾಜ್ಯದಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿಯಲ್ಲಿ ನಿಗಧಿಪಡಿಸಲಾಗಿರುವ ಗುರಿಯ ವಿವರ ಈ ಕೆಳಕಂಡಂತಿರುತ್ತವೆ;<br>
<table>
<tr><th>ವರ್ಷ</th><th>ನಳ ಸಂಪರ್ಕ ಒದಗಿಸಬೇಕಾದ ಮನೆಗಳ ಸಂಖ್ಯೆ (ಲಕ್ಷಗಳಲ್ಲಿ)</th><th>ಆರ್ಥಿಕ ಪ್ರಗತಿ (ರೂ. ಕೋಟಿಗಳಲ್ಲಿ)</th></tr>
<tr><td>2021-22</td><td>25.17</td><td>3031.39</td></tr>
<tr><td>2022-23</td><td>31.98</td><td>6424.65</td></tr>
</table>
ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಿದೆ.</td>
</tr>
<tr>
<td>ಇ)</td>
<td>ಈ ಯೋಜನೆಯ ಕಾಮಗಾರಿಯಲ್ಲಿ ಕಳಪೆ ಗುಣಮಟ್ಟದ ಕಾಮಗಾರಿ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕಳಪೆ ಕಾಮಗಾರಿ ಮಾಡಿದವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ? (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು)</td>
<td>ಕಳಪೆ ಗುಣಮಟ್ಟದ ಕಾಮಗಾರಿ ನಡೆದಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಸ್ವೀಕೃತವಾಗುತ್ತಿದ್ದು, ಈ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸುವಂತೆ ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಲಾಗಿರುತ್ತದೆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಗಳಿಂದ ವರದಿ ಬಂದ ನಂತರ ಅಗತ್ಯ ಕ್ರಮಕ್ಕಾಗಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗುತ್ತಿದೆ.<br><br>ಜಲ ಜೀವನ್ ಮಿಷನ್ ಯೋಜನೆಯನ್ನು ಜಿಲ್ಲಾ ಹಂತದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ರವರು ಯೋಜನೆಯ ಮೇಲುಸ್ತುವಾರಿಯನ್ನು ವಹಿಸಿರುತ್ತಾರೆ. ಕಾಮಗಾರಿಯ ಗುಣಮಟ್ಟವನ್ನು ಪರಿಶೀಲಿಸಲು ಜಿಲ್ಲಾ ಮಟ್ಟದಲ್ಲಿ 3ನೇ ವ್ಯಕ್ತಿ ತಪಾಸಣೆ (TPIA) ಸಂಸ್ಥೆಯನ್ನು ನಿಯೋಜಿಸಲಾಗಿದ್ದು, ರಾಜ್ಯಮಟ್ಟದಲ್ಲಿ ರಾಜ್ಯ ಗುಣಮಟ್ಟ ಸಮಾಲೋಚಕರು (SQM) ರವರನ್ನು ಹಾಗೂ ಕೇಂದ್ರ ಮಟ್ಟದಲ್ಲಿ National Wash Experts ಕಾಲಕಾಲಕ್ಕೆ ನಿಯೋಜಿಸಿ ಕಾಮಗಾರಿಗಳ ಗುಣಮಟ್ಟವನ್ನು ಖಾತರಿಪಡಿಸಿಕೊಳ್ಳಲಾಗುತ್ತಿದೆ.<br><br>ಅಲ್ಲದೇ, ಪ್ರಸ್ತುತ ರಾಜ್ಯಮಟ್ಟದಲ್ಲಿ ಒಟ್ಟಾರೆ ರಾಜ್ಯದ ಜೆಜೆಎಂ ಕಾಮಗಾರಿಗಳ ಗುಣಮಟ್ಟವನ್ನು ಪರೀಕ್ಷಿಸಲು 3ನೇ ವ್ಯಕ್ತಿ ತಪಾಸಣೆಯನ್ನು ನಡೆಸಲು ಕ್ರಮವಹಿಸಲಾಗುತ್ತಿದೆ.</td>
</tr>
</table>

ಸಂ:ಗ್ರಾಕುನೀ&ನೈಇ/36/ಅಧೀಕ್ಷಕರು-1/2023

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶರವಣ ಟಿ ಎ (ವಿಧಾನಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 770 (889) ಕ್ಕೆ ಅನುಬಂಧ-1**

**ಜಲ ಜೀವನ್ ಮಿಷನ್ ಯೋಜನೆಯಡಿ ಕಳೆದ 2 ವರ್ಷಗಳ ಭೌತಿಕ ಹಾಗೂ ಆರ್ಥಿಕ ವಿವರ**

**(ರೂ. ಕೋಟಿಗಳಲ್ಲಿ)**

| ಕ್ರ.ಸಂ | ಜಿಲ್ಲೆ | ಭೌತಿಕ ಗುರಿ | | ಆರ್ಥಿಕ ಪ್ರಗತಿ | |
|---|---|---|---|---|---|
| | | 2021-22 | 2022-23 | 2021-22 | 2022-23 |
| 1 | Bagalkote | 79428 | 61635 | 125.24 | 200.27 |
| 2 | Bengaluru Rural | 0 | 78433 | 0.81 | 121.52 |
| 3 | Bengaluru Urban | 0 | 75342 | 0.87 | 26.21 |
| 4 | Belagavi | 366820 | 114054 | 143.56 | 225.39 |
| 5 | Chikkodi | 0 | 275513 | 131.84 | 204.12 |
| 6 | Ballari | 149478 | 47279 | 123.89 | 93.34 |
| 7 | Vijayanagara | 0 | 157926 | 62.47 | 218.09 |
| 8 | Bidar | 91797 | 159198 | 41.42 | 208.65 |
| 9 | Vijayapura | 231710 | 231226 | 131.86 | 250.50 |
| 10 | Chamarajanagara | 123984 | 57243 | 170.86 | 248.85 |
| 11 | Chikkaballapura | 2561 | 15604 | 3.28 | 35.30 |
| 12 | Chikkamagaluru | 15336 | 21630 | 31.00 | 139.00 |
| 13 | Chitradurga | 29261 | 124478 | 192.91 | 558.87 |
| 14 | Dakshina Kannada | 82169 | 48919 | 79.35 | 245.52 |
| 15 | Davangere | 54330 | 83008 | 94.57 | 169.91 |
| 16 | Dharwad | 26518 | 5789 | 134.53 | 175.33 |
| 17 | Gadag | 124700 | 0 | 138.85 | 73.82 |
| 18 | Kalaburagi | 126476 | 127577 | 104.48 | 179.15 |
| 19 | Hassan | 130980 | 70465 | 171.76 | 315.65 |
| 20 | Haveri | 170015 | 136496 | 134.69 | 335.68 |
| 21 | Kodagu | 37842 | 57467 | 48.59 | 74.86 |
| 22 | Kolar | 0 | 88911 | 0.84 | 7.70 |
| 23 | Koppal | 47241 | 40578 | 108.82 | 347.76 |
| 24 | Mandya | 101171 | 97611 | 154.24 | 207.64 |
| 25 | Mysuru | 81594 | 111906 | 156.31 | 242.93 |
| 26 | Raichur | 120115 | 178253 | 75.60 | 225.38 |
| 27 | Ramanagara | 31591 | 62870 | 84.49 | 79.92 |
| 28 | Shivamogga | 28750 | 111551 | 99.77 | 225.71 |
| 29 | Tumakuru | 31324 | 217315 | 54.14 | 204.70 |
| 30 | Udupi | 28652 | 122950 | 41.84 | 371.82 |
| 31 | Uttara Kannada | 109322 | 72803 | 105.65 | 123.00 |
| 32 | Yadgir | 93835 | 144791 | 71.67 | 260.23 |
| 33 | State Office | 0 | 0 | 11.19 | 27.83 |
| **Total** | | **2517000** | **3198821** | **3031.39** | **6424.65** |

CE
RDW & SD